PW-8
CW-16

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC No.30/2020**

| | | |
|---|---|---|
| ಸಾಕ್ಷಿದಾರರ ಹೆಸರು | : | ನವೀನ್ ಎಂ ಮಾಳಗಿ |
| ತಂದೆಯ/ಗಂಡನ ಹೆಸರು | : | ಮಂಜನಗೌಡ ಎಸ್ ಮಾಳಗಿ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಬಿಳಸನೂರು, ಹರಿಹರ ತಾಲ್ಲೂಕು. |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 8

ಸಿ.ಡಬ್ಲ್ಯೂ 16

ದಿ: 29-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ಮಲೇಬೆನ್ನೂರಿನ ಸಮುದಾಯ ಆರೋಗ್ಯ ಕೆಂದ್ರದಲ್ಲಿ ನಾನು ಮಾರ್ಚ್ 2012 ರಿಂದ ಇದುವರೆಗೂ ನಿಯೋಜನೆ (Deputation) ಮೇರೆಗೆ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. 01-08-2019 ರಂದು ಸಂಜೆ 5-30 ರ ಸಮಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ ರುಕ್ಮಿಣಿ ಎಂಬ ಗಾಯಾಳು ಹಲ್ಲೆಯ ಹಿನ್ನೆಲೆಯಲ್ಲಿ ನನ್ನ ಬಳಿ ಚಿಕಿತ್ಸೆಗೆ ಬಂದಾಗ ಗಾಯಗಳನ್ನುಪರಿಶೀಲಿನ ಮಾಡಿದಾಗ ಆಕೆಯ ಎಡ ಗೈ ನ ಮಧ್ಯದ ಬೆರಳಿನಲ್ಲಿ ಹಾಗೂ ಉಂಗುರ ಬೆರಳಿನಲ್ಲಿ ಒಳ ಪೆಟ್ಟು ಕಂಡು ಬಂದಿದ್ದು ಅವು ಸಾಮಾನ್ಯ ಸ್ವರೂಪದ ಗಾಯಗಳು ಎಂದು ದೃಡೀಕರಿಸಿದೆ. ಆ ಗಾಯಗಳು ಹಲ್ಲೆಯ ಹಿನ್ನಲೆಯಲ್ಲಿ ಆಗಿದ್ದವು ಎಂದು ಹೇಳಿದರು. ಈ ಬಗ್ಗೆ ನಾನು ಗಾಯದ ಪ್ರಮಾಣಪತ್ರವನ್ನು ನೀಡಿದ್ದು ಅದನ್ನು ನಿ.ಪಿ.-

PW-8
CW-16

16 ಎಂದು ನನ್ನ ಸಹಿಯನ್ನು ನಿ.ಪಿ.- 16(ಎ) ಎಂದು ಗುರುತಿಸಲಾಯಿತು. (ದಾಖಲೆಗಳನ್ನು ನೋಡಿ ಸಾಕ್ಷಿದಾರರು ಸಾಕ್ಷಿ ನುಡಿದಿರುತ್ತಾರೆ)ದಿ

**ಪಾಟೀ ಸವಾಲುಃ ಶ್ರೀ .HSY , ವಕೀಲರಿಂದ ಆರೋಪಿತರ ಪರವಾಗಿ**:

2. ಎಂ ಎಲ್ ಸಿ ರಿಜಿಸ್ಟರ್ ನ್ನು ನಾನು ನಿರ್ವಹಿಸುತ್ತೇನೆ. ದಿನಾಂಕಃ 01-08-2019 ನೇದ್ದರ ಎಂ ಎಲ್ ಸಿ ರಿಜಿಸ್ಟರ್ ಇರುತ್ತದೆ. ಪೋಲೀಸರಿಗೆ ಎಂ ಎಲ್ ಸಿ ರಿಜಿಸ್ಟರ್ ನ್ನು ಕೊಟ್ಟಿಲ್ಲ. ಗಾಯಾಳು ರುಕ್ಮಿಣಿ ಒಬ್ಬರೇ ಬಂದಿದ್ದರೋ ಅಥವಾ ಯಾರೋ ಜೊತೆಯಲ್ಲಿ ಬಂದಿದ್ದರೋ ನನಗೆ ಮಾಹಿತಿ ಇರಲಿಲ್ಲ. ನಿ.ಪಿ.- 16 ರಲ್ಲಿ ಕಾಣಿಸಿರುವ ಗಾಯಗಳ ಬಗ್ಗೆ ವ್ಯಕ್ತಿ ನೆಲದ ಮೇಲೆ ಬಿದ್ದಾಗ ಆಗುವ ಸಾಧ್ಯತೆ ಇರುತ್ತದೆ. ಜೋರಾಗಿ ತಿರುವಿದಲ್ಲಿ ಇಂತಹ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಆಗಬಹುದು ಅಥವಾ ಆಗದೇ ಇರಬಹುದು ಎರಡೂ ಸಾಧ್ಯತೆ ಇದೆ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

(ವೇಲಾ .ಡಿ.ಕೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.